# ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು


**ಸಂತೋಷ್ ಕುಮಾರ್ ಆರ್.ಎಂ.**

ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸೈಂಟ್ ಫ್ರಾನ್ಸಿಸ್ ಕಾಲೇಜು, ಕೋರಮಂಗಲ, ಬೆಂಗಳೂರು.


DOI: https://doi.org/10.5281/zenodo.15490942

## ABSTRACT:


ವಚನ ಸಾಹಿತ್ಯವು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅಮೂಲ್ಯ ಸಂಪತ್ತಾಗಿದೆ. ಇದು 12ನೇ ಶತಮಾನದಲ್ಲಿ ಜನಿಸಿದ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದ್ದು, ಬಸವಾದಿ ಶರಣರು ಇದನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡಿದರು. ವಚನ ಸಾಹಿತ್ಯವು ಧಾರ್ಮಿಕ, ಸಾಮಾಜಿಕ ಮತ್ತು ದಾರ್ಶನಿಕ ಚಿಂತನೆಗಳನ್ನು ಒಳಗೊಂಡಿದೆ ಮತ್ತು ಭಕ್ತಿ ಚಳವಳಿಯ ಪ್ರಮುಖ ಭಾಗವಾಗವೂ ಆಗಿದೆ.

ವಚನ ಸಾಹಿತ್ಯವು 'ಸಮಾನತೆ', 'ಶ್ರಮ'-'ಕಾಯಕ' ಮತ್ತು 'ಭಕ್ತಿ'ಯ ಮಹತ್ವ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಶರಣರು ಜಾತಿ, ಲಿಂಗ, ಆರ್ಥಿಕ ಸ್ಥಿತಿ ಮುಂತಾದ ಬೇಧಭಾವಗಳನ್ನು ತಿರಸ್ಕರಿಸಿದರು. ಅಲ್ಲದೆ ಇವರು ಜಾತಿ-ವರ್ಣಭೇದಗಳ ವಿರೋಧವಾಗಿಯೂ ಮತ್ತು ಸಮಾನತೆಗೆ ಹೆಚ್ಚಿನ ಮನ್ನಣೆಯನ್ನು ನೀಡಿದರು.

ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದ ಶರಣರು "ಕಾಯಕವೇ ಕೈಲಾಸ", "ದಾಸೋಹದ ತತ್ತ್ವ", "ಅನುಭವ ಮಂಟಪ"ದ ಪರಿಕಲ್ಪನೆಯ ಮೂಲಕ ಪ್ರಜಾಪ್ರಭುತ್ವದ ನ್ಯಾಯಯುತ ಸಮಾಜದ ನಿರ್ಮಾಣಕ್ಕೆ ಹೇಗೆ ಶ್ರಮಿಸಿದರು ಎಂಬುದನ್ನು ಭಿನ್ನ ವಚನಕಾರರ ಹಿನ್ನೆಲೆಯಲ್ಲಿ ವಿವರಿಸಿ, ವಿಶ್ಲೇಷಿಸುವುದಾಗಿದೆ.

ವಚನಗಳಲ್ಲಿ ಪುರುಷ ಮತ್ತು ಮಹಿಳೆಯ ನಡುವಿನ ಭೇದವನ್ನು ಪ್ರಶ್ನಿಸಿ, ಶಿವಶರಣ ಭಕ್ತರ ಸಮುದಾಯದಲ್ಲಿ ಪ್ರತಿಯೊಬ್ಬರಲ್ಲೂ ಸಮಾನತೆಯನ್ನು ಕಾಣುತ್ತಾ ಪ್ರಾಮಾಣಿಕ ಶ್ರಮ ಮತ್ತು ಸಮಾಜ ಸೇವೆಯ ಪ್ರಾಮುಖ್ಯತೆಯನ್ನು ವಿಶ್ಲೇಷಿಸಲಾಗಿದೆ.

ಈ ಸಾಹಿತ್ಯ ಪ್ರಕಾರವು ಅಂತರಂಗ ಮತ್ತು ಬಹಿರಂಗದ ಪ್ರಾಮುಖ್ಯತೆ, ಅವು ದೈನಂದಿನ ಜೀವನದಲ್ಲಿ ಹೇಗೆ ದೀರ್ಘಕಾಲಿಕವಾಗಿ ವ್ಯಕ್ತಿಯ ಆಂತರಿಕ ಹಾಗೂ ಬಾಹ್ಯ ಬೆಳವಣಿಗೆಯ ಮೇಲೆ ಪ್ರಭಾವ ಬೀರುವುದು ಎಂಬುದನ್ನು ಚರ್ಚಿಸಲಾಗುವುದು.

ವಚನಗಳು ಸತ್ಯ ಮತ್ತು ಚಿತ್ತ ಶುದ್ಧ ಭಕ್ತಿಯ ತತ್ವಗಳ ಮೂಲಕ ಸಮಾಜದ ಪರಿವರ್ತನೆಗೆ ಶ್ರಮಿಸಿದ ಬಗೆ ಹೇಗೆ? ಮತ್ತು ಪ್ರಸ್ತುತ ಸಂದರ್ಭಕ್ಕೂ ವಚನ ಸಾಹಿತ್ಯದ ತತ್ತ್ವಗಳು ಸಾಮಾಜಿಕ ನ್ಯಾಯದ ಪರಿಪ್ರೇಕ್ಷ್ಯದಲ್ಲಿ ಅವುಗಳ ಪ್ರಾಧಾನ್ಯತೆಯನ್ನು ಪ್ರಸ್ತುತತೆಯನ್ನು ಕುರಿತು ತಿಳಿಸುವ ಪ್ರಯತ್ನವನ್ನು

ಮಾಡಲಾಗಿದೆ.

ಈ ಸಾಹಿತ್ಯವು ಶರಣ ಪರಂಪರೆಯ ಜೀವನ ಶೈಲಿಯನ್ನು ಪ್ರತಿಬಿಂಬಿಸುವುದರೊಂದಿಗೆ, ನೈತಿಕ ಜೀವನ ಮೌಲ್ಯಗಳನ್ನು ಬೋಧಿಸುವ ಪ್ರಭಾವಿ ಮಾಧ್ಯಮವಾಗಿದೆ. ವಚನ ಸಾಹಿತ್ಯವು ಕೇವಲ ಧಾರ್ಮಿಕ ಮತ್ತು ಸಾಹಿತ್ಯಿಕ ಪ್ರಕಾರವಲ್ಲದೆ, ಅದು ಸಾಮಾಜಿಕ ಕ್ರಾಂತಿಯ ಸಂಕೇತವಾಗಿ, ಮಾನವೀಯತೆಯ ಸಿದ್ಧಾಂತಗಳ ಸಾರಥಿಯಾಗಿ ಹೇಗೆ ನಿಲ್ಲಬಲ್ಲದು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

## KEYWORDS:

ವಚನ ಸಾಹಿತ್ಯ, ಜೀವನ ಮೌಲ್ಯಗಳು, ಭಕ್ತಿ ಚಳವಳಿ, ಸಮಾನತೆ, ಕಾಯಕ, ದಾಸೋಹ, ಅನುಭವ ಮಂಟಪ.

ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಅಮೂಲ್ಯ ಸಂಪತ್ತು. ಸಾಹಿತ್ಯ ಪರಿಭಾಷೆಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶೇಷ ಕಾವ್ಯ ಪ್ರಕಾರ. ಛಂದಸ್ಸು, ಪ್ರಾಸಗಳು ಸೇರಿದಂತೆ ವ್ಯಾಕರಣ ಬದ್ಧವಾಗಿ ಸಂಸ್ಕೃತ ಲೇಪಿತ ಹಳಗನ್ನಡದಲ್ಲಿ ರೂಪು ಪಡೆದು ವಿಸ್ತಾರ ಪಡೆಯುತ್ತಾ ಬಂದಿದ್ದ ಕನ್ನಡ ಸಾಹಿತ್ಯವನ್ನು ಏಕಾಏಕಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದವರಿವರು. ಜನರಾಡುತ್ತಿದ್ದ ಮಾತುಗಳ ಮೂಲಕ ಒಳಗೊಂದು ಹೊರಗೊಂದು ಎಂಬುದು ಇಲ್ಲದೆ ನಡೆ-ನುಡಿ ಸಿದ್ಧಾಂತವನ್ನು ರೂಪಿಸಿದ ಬಸವಾದಿ ಶರಣರು ವಚನಗಳ ಮೂಲಕ ಇಡೀ ಸಮಾಜದಲ್ಲೊಂದು ಪರಿವರ್ತನೆ ತರುವ ಪ್ರವರ್ತಕರಾದರು. ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತ ಧಾರ್ಮಿಕ, ಸಾಮಾಜಿಕ ಮತ್ತು ದಾರ್ಶನಿಕ ಚಿಂತನೆಗಳನ್ನು ಒಳಗೊಂಡ ವಚನ ಸಾಹಿತ್ಯ ಒಂದು ಚಳವಳಿಯೂ ಆಯಿತು.

ಕಾಯಕ ಮತ್ತು ದಾಸೋಹಗಳ ಮೂಲಕ ಸಮಾಜೋತ್ಪನ್ನಗಳ ಸಮಪಾಲು ಸಿದ್ಧಾಂತವನ್ನು ಮಂಡಿಸುವ ಈ ಚಳವಳಿ ಭಾರತೀಯ ಸಂಸ್ಕೃತಿಯಲ್ಲಿ ಅತಿ ಮುಖ್ಯವಾದುದಾಗಿದೆ.

ವಚನ ಸಾಹಿತ್ಯವು 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದ್ಭವಗೊಂಡ ಮಹತ್ವದ ಸಾಹಿತ್ಯ ಪ್ರಕಾರವಾಗಿದೆ. ಇದು ಧಾರ್ಮಿಕ ಕಾರಣಗಳಾದ ಶೈವ (ಕಾಳಾಮುಖ, ಪಾಶುಪತ, ಕಪಾಲಿಕ ಮುಂತಾದ ಶೈವ ಪಂಗಡಗಳು ಪ್ರಬಲವಾಗಿದ್ದವು.) ಇವುಗಳ ಕಠಿಣ ಆಚರಣೆಗಳು, ಜಾತಿ ವ್ಯವಸ್ಥೆ ಮತ್ತು ಅಸಮಾನತೆ (ಜಾತಿ ಆಧಾರಿತ ಭೇದಭಾವ ಮತ್ತು ಅಸಮಾನತೆ, ನಿಮ್ನ ವರ್ಗದ ಜನರು ಶೋಷಣೆ), ರಾಜಕೀಯ ಅಸ್ಥಿರತೆ (ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ರಾಜಕೀಯ

ಅಸ್ಥಿರತೆ ಮತ್ತು ಅಶಾಂತಿ), ಚಂಪೂ ಸಾಹಿತ್ಯ (ಗದ್ಯ ಮತ್ತು ಪದ್ಯದ ಮಿಶ್ರಣವಾಗಿದ್ದು ) ಸಂಕೀರ್ಣತೆಯನ್ನು ಅರಿತು, ವಚನಗಳ ಮೂಲಕ ಜನಜಾಗೃತಿ ಮೂಡಿಸಿದರು.

ಈ ಎಲ್ಲಾ ಕಾರಣಗಳಿಂದ ಪ್ರೇರಿತವಾಗಿ, ವಚನ ಸಾಹಿತ್ಯವು ಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಕ್ರಾಂತಿಯ ಮೂಲಕ ಸಮಾಜದಲ್ಲಿ ಸಮಾನತೆ, ಶ್ರಮದ ಗೌರವ, ಮತ್ತು ಭಕ್ತಿಯಂತಹ ಮೌಲ್ಯಗಳನ್ನು ಪ್ರತಿಪಾದಿಸಿದರು. ಹೀಗೆ ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಿಕ ಕಾರಣಗಳಿಂದ ಪ್ರೇರಿತವಾಗಿ ಸೃಷ್ಠಿಯಾದ ಈ ಸಾಹಿತ್ಯವು ಕನ್ನಡ ಸಾಹಿತ್ಯದ ಅಮೂಲ್ಯ ಸಂಪತ್ತಾಗಿ ಉಳಿಯಿತು.

ಮೊದಲು ಕನ್ನಡ ನಾಡಿನಲ್ಲಿ ವಚನ ಸಾಹಿತ್ಯವು ಚಳವಳಿಯ ಮುಖವಾಣಿಯಾಗಿತ್ತು. ಇಲ್ಲಿ ರಚನೆಯಾದ ವಚನಗಳು ಅತ್ಯಂತ ಸರಳ ಹಾಗೂ ನೇರವಾಗಿವೆ. ಹಲವಾರು ಕವಿಗಳು, ಜನಸಾಮಾನ್ಯರು, ಸಾಹಿತ್ಯ ರಚಿಸಿದ್ದು, ಇವರು ಸ್ಥಾವರ ಸಮಾಜವನ್ನು ತಿರಸ್ಕರಿಸಿ, ಜಂಗಮ ಸಮಾಜದ ತತ್ವಗಳನ್ನು ತಮ್ಮ ಬದುಕಿನಲ್ಲಿ ಹಾಗೂ ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದಾರೆ.

ವಚನ ಸಾಹಿತ್ಯದಲ್ಲಿ ಅಲ್ಲಮ ಪ್ರಭು, ಅಕ್ಕಮಹಾದೇವಿ, ಬಸವಣ್ಣ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಸೂಳೆ ಸಂಕವ್ವೆ, ಏಕಾಂತ ರಾಮಯ್ಯ, ಹಡಪದ ಅಪ್ಪಣ್ಣ, ಒಕ್ಕಲು ಮಾದಯ್ಯ, ಮಡಿವಾಳ ಮಾಚಯ್ಯ, ಆಯ್ದಕ್ಕಿ ಲಕ್ಕವ್ವ, ಹೆಂಡದ ಮಾರಯ್ಯ ಮುಂತಾದ 150ಕ್ಕೂ ಹೆಚ್ಚು ಶರಣರು ವಚನ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಈ ಕಾಲದ ಸಾಹಿತ್ಯದ ವಿಶೇಷತೆಯೆಂದರೆ ಇಡೀ ಜಗತ್ತಿಗೆ ಪ್ರಜಾಪ್ರಭುತ್ವದ ಕಲ್ಪನೆಯನ್ನು ಅನುಭವ ಮಂಟಪದ ಮೂಲಕ ಇಂದಿನ ಸಂಸದೀಯ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಂತಹ ಧೀಮಂತ ಸಾಹಿತ್ಯ ಇದಾಗಿದೆ. ಆದ್ದರಿಂದ ಆಧುನಿಕ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಹೆಮ್ಮೆಯಿಂದ ಮಾತಾಡುವ ನಾವು ಇಡೀ ಪ್ರಜಾಪ್ರಭುತ್ವದ ಪರಿಕಲ್ಪನೆ ರೂಪುಗೊಂಡಿದ್ದು ಕೂಡ ನಮ್ಮ ಕರುನಾಡಿನಲ್ಲಿ ಮತ್ತು ಕನ್ನಡ ಭಾಷೆಯಲ್ಲಿ ಎನ್ನುವುದನ್ನು ಹೆಮ್ಮೆಯಿಂದ ನೆನಪಿಸಿಕೊಳ್ಳಬಹುದಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತುಂಬಾ ವಿಶೇಷ ಸ್ಥಾನ ವಚನ ಸಾಹಿತ್ಯಕ್ಕೆ ಇದೆ. ಸಮಾಜದ ಸ್ವಾಸ್ಥ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಚನೆಯಾದ ವಚನ ಸಾಹಿತ್ಯದಲ್ಲಿ ಧರ್ಮ, ನೀತಿ, ತತ್ವ, ಆಧ್ಯಾತ್ಮ, ಸಮಾಜ, ವಿಜ್ಞಾನ, ಮನೋವಿಜ್ಞಾನ, ರಾಜಕೀಯ ಹೀಗೆ ಪರಿಶುದ್ಧ ಜೀವನಕ್ಕೆ ಬೇಕಾದ ಎಲ್ಲ ಸಂಗತಿಗಳೂ ಅಡಕವಾಗಿವೆ. ಅವುಗಳನ್ನು ಭಿನ್ನ ವಚನಕಾರರ ವಚನಗಳ ಮೂಲಕ ಈ ಕೆಳಗೆ ವಿವರಿಸುತ್ತಾ ವಿಶ್ಲೇಷಿಸಲಾಗಿದೆ.

ವಚನಗಳಲ್ಲಿ ಸಮಾನತೆ: ಉಚ್ಚ–ನೀಚ ಭಾವನೆಗಳನ್ನು ತ್ಯಜಿಸಿ ಸಮಾನತೆಯ ಆದರ್ಶವನ್ನು ಬೋಧಿಸಿದ್ದಾರೆ. ವಚನ ಸಾಹಿತ್ಯದಲ್ಲಿ ಸಮಾನತೆ ಮಹತ್ವದ ತತ್ವವಾಗಿದೆ. ಜಾತಿ, ಕುಲ, ಲಿಂಗ, ವೃತ್ತಿ, ಆರ್ಥಿಕ ಸ್ಥಿತಿ ಇತ್ಯಾದಿ ಬೇಧಭಾವಗಳನ್ನು ತಿರಸ್ಕರಿಸಿ, ಎಲ್ಲರನ್ನೂ ಸಮನಾಗಿ ಕಾಣುವ ಭಾವನೆ ವಚನಕಾರರ ಮೂಲ ಸಂದೇಶವಾಗಿದೆ. ಶರಣರು ಸಮಾನತೆಯ ಮಹತ್ವವನ್ನು ಪ್ರತಿಪಾದಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳಲ್ಲಿ ಒಂದಾದ ಬಸವಣ್ಣನವರ ವಚನ ಹೀಗಿದೆ.

**"ನಾದಪ್ರಿಯವು ಲಿಂಗ, ನೀರಪ್ರಿಯವು ಚಂದ್ರ,**
**ಆತ್ಮಪ್ರಿಯವು ಶರಣ, ಏನಕ್ಕಿದು ಜಾತಿ–ವಿಜಾತಿ?"**

**– ಬಸವಣ್ಣ**

ಈ ವಚನದಲ್ಲಿ ಭಕ್ತಿಯ ಸಮಾನತೆ, ಶರಣ ಸಂಪ್ರದಾಯದ ತತ್ತ್ವ , ಮತ್ತು ಜಾತಿ–ವರ್ಣಭೇದಗಳ ಅನಾವಶ್ಯಕತೆ ಎಂಬ ಮಹತ್ವದ ವಿಚಾರಗಳನ್ನು ಒತ್ತಿಹೇಳಲಾಗಿದೆ. ದೇವರಿಗೆ ಜಾತಿ, ವರ್ಣ, ಕುಲ, ಹಣ ಇತ್ಯಾದಿಗಳು ಮುಖ್ಯವಲ್ಲ; ಭಕ್ತಿಯ ಭಾವನೆ ಮತ್ತು 'ನಾದ ಪ್ರಿಯ' ಮುಖ್ಯ. ಇದು 'ಸತ್ಯ, ಶುದ್ಧ ಭಕ್ತಿ, ಮತ್ತು ಭಾವನಾತ್ಮಕ ಶರಣಾಗತಿ' ಯನ್ನು ಪ್ರತಿಪಾದಿಸುತ್ತದೆ. 'ನೀರಪ್ರಿಯವು ಚಂದ್ರ' ಇದೇ ರೀತಿಯಾಗಿ, ಪರಮಾತ್ಮನ ಪ್ರೀತಿ ಹಾಗೂ ಅನುಗ್ರಹ ಭಕ್ತನಿಗೆ ಸದಾ ಲಭ್ಯ. ಈ ವಚನದ ಸಾಲು ಪಾವಿತ್ರ್ಯ ಮತ್ತು ಶುದ್ಧ ಭಕ್ತಿಯ ಮಹತ್ವವನ್ನು ತೋರಿಸುತ್ತದೆ. 'ಆತ್ಮಪ್ರಿಯವು ಶರಣ' ಶರಣನಿಗೆ ತನ್ನ ಆತ್ಮದ ಪರಿಚಯವೇ ಶ್ರೇಷ್ಠ. ಆತ್ಮನಿಗಾಗಿ ಪರಮಾತ್ಮನನ್ನು ಆರಾಧಿಸುವ ಶರಣನಿಗೆ ಬಾಹ್ಯ ಜಾತಿ–ವರ್ಣದ ಬೇಧ ಇರುವುದಿಲ್ಲ. 'ಏನಕ್ಕಿದು ಜಾತಿ–ವಿಜಾತಿ?' ದೇವರ ಮುಂದೆ ಜಾತಿ–ವರ್ಣ ಬೇಧ ಎಂದರೇನು? ಎಂದಿದ್ದಾರೆ. ಈ ವಚನ ಜಾತಿ ವ್ಯವಸ್ಥೆಯ ವಿರುದ್ಧ ಮತ್ತು ಸಮಾನತೆಯ ಪರವಾದ ಘೋಷಣೆಯಾಗಿದೆ. ಈ ವಚನವು ಸಮಾನತೆ, ಸಹಾನುಭೂತಿ ಮತ್ತು ಧಾರ್ಮಿಕ ಸಹಬಾಳ್ವೆ ಎಂಬ ತತ್ತ್ವಗಳನ್ನು ಬೋಧಿಸುತ್ತದೆ. ಇಂದಿನ ಸಮಾಜದಲ್ಲಿ ಜಾತಿ–ಧರ್ಮದ ಹೆಸರಿನಲ್ಲಿ ನಡೆಯುವ ಬೇಧಭಾವ ಮತ್ತು ರಾಜಕೀಯ ಪ್ರಯೋಗಗಳ ವಿರುದ್ಧ ಈ ವಚನ ಅತ್ಯಂತ ಪ್ರಸ್ತುತ.

ಬಸವಣ್ಣನ ಈ ವಚನ ಸರ್ವಧರ್ಮ ಸಮನ್ವಯ, ಮಾನವೀಯತೆ, ಶುದ್ಧಭಕ್ತಿಯ ಮಹತ್ವ, ಮತ್ತು ದೈವಿಕ ಅನುಭವದ ಪ್ರಾಮುಖ್ಯತೆಯನ್ನು ಸಾರುತ್ತದೆ.

**"ಅಣ್ಣ ತಂಗಿಯರೆಂಬ ಭೇದವೇಕಯ್ಯ?**
**ಶಿವಭಕ್ತರಲ್ಲಿ ಭೇದವಿಲ್ಲವಯ್ಯ!**
**ಸದ್ಯಾನಂದನಂದ ಶಿವಭಕ್ತರಲ್ಲ**
**ಜಾತಿ ಲಿಂಗವ ಭೇದವಿಲ್ಲವಯ್ಯ!"**

**– ಅಕ್ಕಮಹಾದೇವಿ**

ಅಕ್ಕ ಮಹಾದೇವಿಯ ಈ ವಚನವು ಸಮಾನತೆಯ ತತ್ತ್ವವನ್ನು ಪ್ರತಿಪಾದಿಸುವ ಒಂದು ಮಹತ್ವದ ಉದಾಹರಣೆಯಾಗಿದೆ. ಇದು ಶಿವಭಕ್ತರ ಸಮುದಾಯದಲ್ಲಿ ಯಾವುದೇ ಬಾಹ್ಯ ಭೇದಭಾವ ಇಲ್ಲ ಎಂದು ಸಾರುತ್ತದೆ.

ಈ ವಚನದಲ್ಲಿ ಅಣ್ಣ ತಂಗಿಯರೆಂಬ ಭೇದವೇಕಯ್ಯ? ಎಂಬ ಪ್ರಶ್ನೆಯ ಮೂಲಕ ಪುರುಷ ಮತ್ತು ಮಹಿಳೆಯ ನಡುವೆ ಇರುವ ವ್ಯತ್ಯಾಸದ ಅವಶ್ಯಕತೆ ಏನು? ಎಂಬುದನ್ನು ಪ್ರಶ್ನಿಸಲಾಗಿದೆ. ಅಕ್ಕ ಮಹಾದೇವಿ ಶರಣ ಸಂಪ್ರದಾಯದಲ್ಲಿ ಸ್ತ್ರೀಯರಿಗೂ ಸಮಾನ ಹಕ್ಕುಗಳು, ಮಾನ್ಯತೆ ಮತ್ತು ಭಕ್ತಿಯಲ್ಲಿ ಸಡಗರವಾಗಿ ಪಾಲ್ಗೊಳ್ಳುವ ಅವಕಾಶವಿದೆ ಎಂದು ಒತ್ತಿಹೇಳುತ್ತಾರೆ. ಹಾಗೆಯೇ,

**“ಮಡೆಹೊತ್ತ ಮನೆಯಲ್ಲಿ ಹುಟ್ಟಿದರೆನೋ?**
**ಮಡೆಹೊತ್ತ ಮನೆಯಲ್ಲಿ ಸಾಯದೇನೋ?**
**ಚೆನ್ನಮಲ್ಲಿಕಾರ್ಜುನನ ಶರಣರಾಗಿ ಬರಲದಾದರೆ,**
**ಹುಟ್ಟಿದದು, ಬಿಟ್ಟಿದದು ಏನಾಯಿತು?”**

**– ಅಕ್ಕಮಹಾದೇವಿ**

ಈ ವಚನದಲ್ಲಿ ಜನ್ಮ, ಜಾತಿ, ಸಮಾಜದ ಸ್ಥಿತಿಗತಿ, ಮತ್ತು ಆಧ್ಯಾತ್ಮಿಕ ಸಾರ್ಥಕತೆಯ ಕುರಿತು ಆಳವಾದ ತತ್ತ್ವವನ್ನು ಪ್ರತಿನಿಧಿಸುವಂತಿದೆ. ಮೊದಲ ಎರಡು ಸಾಲುಗಳಲ್ಲಿ ಮಾನವನ ಜನ್ಮ ಮತ್ತು ಮರಣವನ್ನು ಕೇವಲ ಶಾರೀರಿಕ ಘಟನೆಯಾಗಿಯೇ ನೋಡುವ ಸಾಮಾಜಿಕ ದೃಷ್ಟಿಕೋನವನ್ನು ಪ್ರಶ್ನಿಸುತ್ತಾರೆ. ಮನುಷ್ಯನ ಹುಟ್ಟು ಎಲ್ಲಿ, ಯಾವ ಪರಿಸ್ಥಿತಿಯಲ್ಲಿ, ಯಾವ ಜಾತಿಯಲ್ಲಿ ಎಂಬುದಕ್ಕಿಂತ ಆತನು ಹೇಗೆ ಬದುಕುತ್ತಾನೆ, ಏನನ್ನು ಸಾಧಿಸುತ್ತಾನೆ ಎಂಬ ವಿಚಾರವೇ ಪ್ರಮುಖವಾಗಿದೆ.

ಪ್ರಸ್ತುತ ಸಮಾಜದಲ್ಲಿ ಹಲವರು ಜನ್ಮವನ್ನು ಮಹತ್ವದ ಮೂಲಭೂತ ಅಂಶವೆಂದು ಪರಿಗಣಿಸುತ್ತ, ಜನ್ಮಸ್ಥಳ, ಕುಟುಂಬ, ಅಥವಾ ಜಾತಿಯನ್ನು ಆಧಾರ ಮಾಡಿಕೊಂಡು ತಮ್ಮ ಹೆಮ್ಮೆ ಮತ್ತು ಅಹಂಕಾರವನ್ನು ಹೊಂದುವವರು. ಆದರೆ ಇವುಗಳೆಲ್ಲಾ ಆಧ್ಯಾತ್ಮಿಕ ಪ್ರಗತಿಗೆ ಅಸಂಬಂಧಿತವಾದವು. ಭಕ್ತಿಯೇ ಜೀವನದ ಪರಮೋಚ್ಚ ಉದ್ದೇಶವೆಂದು ತಿಳಿಸಿದ್ದಾರೆ.

ಅಕ್ಕ ಮಹಾದೇವಿಯ ಕಾಲದಲ್ಲಿ ಮಹಿಳೆಯರು ಸಾಮಾಜಿಕ ನಿರ್ಬಂಧಗಳಿಗೆ ಒಳಗಿದ್ದರೂ, ಅವರು ಶರಣ ಪರಂಪರೆಯಲ್ಲಿ ನಿರ್ಭೀತಿಯಾಗಿ ತಮ್ಮ ಸ್ಥಾನವನ್ನು ಪಡೆದರು. ಈ ವಚನ ಸ್ತ್ರೀಯರ ಅಧ್ಯಾತ್ಮಿಕ ಹಾಗೂ ಸಾಮಾಜಿಕ ಮುಕ್ತಿಯನ್ನು ಪ್ರತಿಪಾದಿಸುತ್ತದೆ.

**ವಚನಗಳಲ್ಲಿ ಶ್ರಮ ಮತ್ತು ಕಾಯಕ:** 'ಕಾಯಕವೇ ಕೈಲಾಸ' ಈ ತತ್ವವು ಭಕ್ತಿಯ

ಹೊಸ ಮಾರ್ಗಕ್ಕೆ ನಾಂದಿಯನ್ನು ಹಾಡಿತು. ಕೇವಲ ಪೂಜೆ, ತಪಸ್ಸು, ಅಥವಾ ಮಂತ್ರ ಜಪ ಮಾಡುವುದು ಮಾತ್ರ ಭಕ್ತಿಯ ಮಾರ್ಗವಲ್ಲ. ಪ್ರಾಮಾಣಿಕ ಶ್ರಮ, ನಿಷ್ಠೆಯ ಕೆಲಸ ಮತ್ತು ಸಾಮಾಜಿಕ ಹಿತಚಿಂತನೆಯೇ ಮುಖ್ಯ. ಸಮಾಜದಲ್ಲಿ ಉಂಟಾಗಿರುವ ಅಸಮಾನತೆ, ಭಿಕ್ಷಾಟನೆ, ವೃತ್ತಿಯ ಮೇಲಿನ ವಿಭಜನೆ ಇವುಗಳನ್ನು ದೂರಮಾಡಲು ಕಾಯಕದ ಮಹತ್ವನ್ನು ಪ್ರಧಾನವಾಗಿ ಹೇಳಲು ಪ್ರಯತ್ನಿಸಿದವರು ವಚನಕಾರರು. ಶ್ರಮ ಮತ್ತು ಕಾಯಕಕ್ಕೆ ಮಹತ್ವ ನೀಡುವ ವಚನಗಳು ಶರಣ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆದಿವೆ.

**“ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ**
**ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ**
**ಆಸೆ ಎಂಬುದು ಭವದ ಬೀಜ**
**ನಿರಾಸೆಯೆಂಬುದು ನಿತ್ಯಮುಕ್ತಿ**
**ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ. “**

**– ಕಾಳವ್ವೆ**

ಕಾಯಕದಲ್ಲಿ ಮುಕ್ತಿ ಕಾಣುವ ಪರಿಯನ್ನು ಅದರ ಪ್ರಾಧಾನ್ಯತೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇದು ಒಬ್ಬ ದಲಿತ ಮಹಿಳೆ ಶರಣ ಸಂಕುಲದ ಒಳಗೆ ಬಂದು ಇಷ್ಟೊಂದು ಮಹತ್ತರವಾದ ವಿಚಾರಗಳನ್ನು ಒಳಗೊಂಡ ವಚನರಚನೆ ಮಾಡಿದ್ದಾಳೆಂದರೆ ಬಸವಣ್ಣನವರು ಜಗತ್ತಿನಲ್ಲಿ ಮೊದಲ ಬಾರಿಗೆ ಎಷ್ಟರ ಮಟ್ಟಿಗೆ ವಯಸ್ಕರ ಶಿಕ್ಷಣದ ವ್ಯವಸ್ಥೆಯನ್ನು ಕಲ್ಪಿಸಿರಬಹುದು ಎಂಬುದನ್ನು ಯೋಚಿಸಬೇಕಿದೆ.

ಕಾಯಕವಿಲ್ಲದೆ ಅಳಿಯುವ ಭಿಕ್ಷುಕರಂತೆ ಭಕ್ತರು ಇರಬಾರದು, ಬದಲಾಗಿ ತಮ್ಮ ಶ್ರಮದ ಮೂಲಕ ಸಮಾಜಕ್ಕೂ ಮತ್ತು ಭಗವಂತನಿಗೂ ಸೇವೆ ಮಾಡಬೇಕು. ಮಾಡುವ ಕಾಯಕ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ (ಸತ್ಯದಿಂದ) ಮತ್ತು ಪಾವನತೆಯಿಂದ (ಶುದ್ಧತೆಯಿಂದ) ಕೂಡಿರಬೇಕು. ಕೇವಲ ದುಡ್ಡು ಸಂಪಾದನೆ ಅಥವಾ ಅನೈತಿಕ ಕಾಯಕ ಯಥಾರ್ಥ ಸೇವೆಯಾಗುವುದಿಲ್ಲ. ಅಸತ್ಯದ ಮೂಲಕ ಮಾಡಿದ ಕೆಲಸವು ಸಾರ್ಥಕವಲ್ಲ. ಜೀವನದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ಆಸೆಗಳೇ ಕಷ್ಟದ ಮೂಲವಾಗಿವೆ. ಕಾಯಕ, ಭಕ್ತಿ, ನಿರಾಸೆ, ಸತ್ಯ ಮತ್ತು ಶುದ್ಧತೆ – ಇವುಗಳೇ ಪ್ರಮುಖ ಎಂಬ ಅಭಿಪ್ರಾಯ ಕಾಳವ್ವೆ ಯಲ್ಲಿ ಗಮನಿಸಬಹುದಾಗಿದೆ.

**“ಆವ ಕಾಯಕವಾದರೂ ಸ್ವ ಕಾಯಕವ ಮಾಡಿ**
**ಗುರುಲಿಂಗ ಜಂಗಮದ ಮುಂದಿಟ್ಟು,**
**ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು**
**ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು,**
**ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,**

**ಭಾಪು ಲದ್ದೆಯ ಸೋಮಾ. "**

**– ಕಾಯಕದ ಸೋಮಯ್ಯ**

ಕಾಯಕದ ಸೋಮಯ್ಯ ಶರಣ ಪರಂಪರೆಯ ಪ್ರಮುಖ ಶರಣನಾಗಿದ್ದು, ಕಾಯಕ ತತ್ತ್ವದ ಪ್ರಬಲ ಪರಿಕಲ್ಪನೆಯನ್ನು ಈ ವಚನದ ಮೂಲಕ ವ್ಯಕ್ತಪಡಿಸುತ್ತಾರೆ. ಯಾವುದೇ ಕಾಯಕವಾಗಲಿ, ತಾನೇ ಮಾಡಬೇಕಾದ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು. ಸ್ವಂತ ಶ್ರಮ ಮತ್ತು ಪ್ರಾಮಾಣಿಕತೆಯೊಂದಿಗೆ ಶ್ರದ್ಧೆಯಿಂದ ಕೆಲಸ ಮಾಡುವುದೇ ಭಕ್ತಿಯ ನಿಜವಾದ ರೂಪ. ಪರದಾರಿ ಕಾಯಕವನು ಅವಲಂಬಿಸದೆ ಸ್ವಾವಲಂಬನೆಯಿಂದ ಬದುಕುವಂತೆ ಹೇಳುತ್ತಾರೆ. ಶರಣ ಪರಂಪರೆಯಲ್ಲಿ ಗುರು– ಆತ್ಮಜ್ಞಾನವನ್ನು, ಲಿಂಗ– ಭಕ್ತನ ಪರಮ ಲಕ್ಷ್ಯವನ್ನು, ಮತ್ತು ಜಂಗಮ– ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡ ಶರಣರು ಮಹತ್ವಪೂರ್ಣವಾಗುವರು. ಯಾವ ಕಾರ್ಯ ಮಾಡಲಾದರೂ ಶಿವನ ಸ್ಮರಣೆ ಮತ್ತು ಧರ್ಮದ ಸಂಕೇತವಾಗಿ ಮಾಡಬೇಕು. ಶ್ರಮದಿಂದ ಮಾಡಿದ ಕಾಯಕದಿಂದ ಒಕ್ಕಿದ ಫಲವನ್ನು (ಉತ್ಪಾದನೆಯನ್ನು) ದೇವನಿಗೆ ಅರ್ಪಿಸಬೇಕು. "ಶೇಷ (ಬಾಕಿ ಉಳಿದದ್ದು) ಜೀವನ ನಿರ್ವಹಣೆಗೆ ಬಳಸಬೇಕು" ಎಂಬುದನ್ನು ಹೇಳುತ್ತಾರೆ. ಇದು ನಿಷ್ಕಾಮ ಕರ್ಮ ತತ್ತ್ವಕ್ಕೆ ಹತ್ತಿರವಾದ ಧಾರ್ಮಿಕ ಜೀವನ ಕ್ರಮವಾಗಿದೆ. ವ್ಯಕ್ತಿಯು ಜೀವನದಲ್ಲಿನ ಸಂಕಟಗಳನ್ನು ತಾಳ್ಮೆಯಿಂದ, ಧೈರ್ಯದಿಂದ ಸ್ವೀಕರಿಸಬೇಕು. ಜೀವನದ ನಷ್ಟ–ಲಾಭಗಳಿಗೆ ದೇವರನ್ನು ಹೊಣೆಯಲ್ಲ. ಕಾಯಕವೇ ದೇವರ ಸೇವೆ, ಅದು ನಮ್ಮ ಆದ್ಯ ಕರ್ತವ್ಯ, ಯಾರಿಂದಲೂ ಯಾವುದೇ ನಿರೀಕ್ಷೆಯಿಲ್ಲದೆ ನಿಷ್ಠೆಯಿಂದ ಶ್ರಮಿಸುವುದು ಶರಣತ್ವ ಎಂಬ ಅಭಿಪ್ರಾಯವಿದೆ.

**"ಕೈಕೆಲಸವಿಲ್ಲದೆ ಕಾಯಕವಿಲ್ಲದೆ,**
**ಶರಣನ ಪಾಡೇನು ಹೇಳಯ್ಯ?"**

**– ಚನ್ನಬಸವಣ್ಣ**

ಶರಣನು ಕೆಲಸವಿಲ್ಲದೆ, ಶ್ರಮವಿಲ್ಲದೆ ಸುಮ್ಮನೆ ಇದ್ದರೆ, ಅವನ ಜೀವನದಲ್ಲಿ ಮಹತ್ವವೇನು? ಕಾಯಕವಿಲ್ಲದೆ, ಸಾಧನೆಯಿಲ್ಲದೆ ಧಾರ್ಮಿಕ ಜೀವನವೂ ಅರ್ಥವಿಲ್ಲ. ಭಕ್ತನು ಪರಿಶ್ರಮ ಮತ್ತು ಶುದ್ಧ ಹೃದಯದೊಂದಿಗೆ ಸಾಧನೆ ಮಾಡಿದರೆ, ಆತನಿಗೆ ದೇವರ ಅನುಗ್ರಹ ದೊರಕುತ್ತದೆ.

ಶರಣರ ವಚನಗಳು ಮತ್ತು ತತ್ವ ಕೂಡ ಕಾಯಕದ ಉತ್ಪತ್ತಿಯಾಗಿವೆ. ಎಂಬುದನ್ನು ಮರೆಯಬಾರದು. ಅನೇಕ ವಚನಕಾರರು ತಮ್ಮ ಕಾಯಕಗಳ ಅನುಭವದ ಮೂಲಕವೇ ಅನುಭವಿಯಾಗಿದ್ದಾರೆ. ಅವರ ವಚನಗಳಲ್ಲಿ. ತೋಚುವ ಪ್ರತಿಮೆ, ಪ್ರತೀಕ ಮತ್ತು ಸಂಕೇತಗಳು ಅವರವರ ಕಾಯಕಗಳ ಅನುಭವದ ಮೂಲಕವೇ ಸೃಷ್ಟಿಯಾಗಿವೆ. ಕಾಯಕದ ವಸ್ತುಗಳು ಕಾವ್ಯ ಪ್ರಥಮಗಳು ಆಗುತ್ತಲೇ

ತತ್ವವನ್ನು ಬಿತ್ತುವ ಮೂಲಕ ಕಾಯಕ ಮಹತ್ವವನ್ನು ಇದರಲ್ಲಿ ಗುರುತಿಸಬಹುದಾಗಿದೆ.

ವಚನಗಳಲ್ಲಿ ಭಕ್ತಿ ಮತ್ತು ಆಧ್ಯಾತ್ಮಿಕತೆ: ಭಕ್ತಿ ಮತ್ತು ಆಧ್ಯಾತ್ಮಿಕತೆ ವಚನ ಸಾಹಿತ್ಯದ ಮೂಲಭೂತ ಅಂಶಗಳಾಗಿವೆ. 12ನೇ ಶತಮಾನದಲ್ಲಿ ಬಸವಣ್ಣ ಮತ್ತು ಇತರ ಶರಣರು ಸಾಮಾಜಿಕ ಸಮಾನತೆ, ಭಕ್ತಿ ಮತ್ತು ಶುದ್ಧ ಆಧ್ಯಾತ್ಮಿಕತೆಯ ಸಂದೇಶವನ್ನು ವಚನಗಳ ಮೂಲಕ ಹರಡಿದರು. ಇವರಲ್ಲಿ ಬಸವಣ್ಣ, ಅಕ್ಕ ಮಹಾದೇವಿ, ಎಲ್ಲಯ್ಯ ಪ್ರಭು, ಚನ್ನಬಸವಣ್ಣ, ದಾಸಿಮಯ್ಯ, ಕಾಳವ್ವ, ಸೋಮಯ್ಯ ಮತ್ತು ಇತರರು ಪ್ರಮುಖರು.

**''ಭಕ್ತಿ ಇಲ್ಲದ ಬಡವ ನಾನಯ್ಯಾ**
**ಕಕ್ಕಯ್ಯನ ಮನೆಯಲು ಬೇಡಿದೆ**
**ಚೆನ್ನಯ್ಯನ ಮನೆಯಲು ಬೇಡಿದೆ**
**ದಾಸಯ್ಯನ ಮನೆಯಲ್ಲೂ ಬೇಡಿದೆ**
**ಎಲ್ಲ ಪುರಾತನರು ನೆರೆದು ಭಕ್ತಿ**
**ಭಿಕ್ಷೆಯನಿಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು.**
**ಕೂಡಲ ಸಂಗಮದೇವ. ''**

**- ಬಸವಣ್ಣ**

ವಚನದ ಪ್ರಕಾರ ಭಕ್ತಿ ಇಲ್ಲದವನು ನಿಜವಾದ ಬಡವ. ಸಂಪತ್ತು ಇಲ್ಲದಿದ್ದರೂ ಭಕ್ತಿ ಹೊಂದಿದವನು ಪರಮ ಶ್ರೀಮಂತನು. ಶರಣ ಸಂಪ್ರದಾಯದಲ್ಲಿ, ಶರಣರ ಬಳಿ ಭಕ್ತಿ ಮುಖ್ಯ. ಭಕ್ತಿಯಿಂದ ಪೂರ್ಣಗೊಂಡಾಗಲೇ ಜೀವನ ಸಾರ್ಥಕ, ಭಕ್ತಿಯಿಲ್ಲದೆ ಬೇಕಾದರೂ ತಾನು ಶರಣರ ಪ್ರೀತಿಯನ್ನು ಪಡೆಯಲಾರನು. ನಿಜವಾದ ಶ್ರೀಮಂತಿಕೆ ಹಣವಲ್ಲ, ಭಕ್ತಿಯಾಗಿದೆ. ಶರಣರು ಕೇವಲ ಭಕ್ತಿಪೂರ್ಣ ಮತ್ತು ಶುದ್ಧ ಮನಸ್ಸಿನವರಿಗೆ ಮಾತ್ರ ಗೌರವ ಕೊಡುವರು.

ಭಕ್ತಿಯಿಂದಲೇ ಮನಸ್ಸು, ಜೀವನ ಮತ್ತು ಅಧ್ಯಾತ್ಮಿಕ ಪಥ ಪರಿಪೂರ್ಣವಾಗುತ್ತದೆ. ಭಕ್ತಿಯೊಂದಿಗೆ ಬಂದ ಭಿಕ್ಷೆ ಮಾತ್ರ ತೃಪ್ತಿಯನ್ನು ನೀಡಬಲ್ಲದು.

**''ಒಳಗಿಲ್ಲದ ಭಕ್ತಿ ಹೊರಗೇಕಯ್ಯ?**
**ಎಣ್ಣೆಯಿಲ್ಲದ ಬತ್ತಿಯ ಬೆಳಕೇಕಯ್ಯ?''**

**- ಚನ್ನಬಸವಣ್ಣ**

ಈ ವಚನ ನಿಜವಾದ ಭಕ್ತಿಯ ಅವಶ್ಯಕತೆ ಮತ್ತು ವೈಷಯಿಕ (ಹೊರಗಿನ) ಆಚಾರಗಳ ತಾತ್ಸಾರತೆಯನ್ನು ಒತ್ತಿ ಹೇಳುತ್ತದೆ. ಶುದ್ಧ ಭಕ್ತಿಯಿಲ್ಲದೆ ಮಾಡಿದ ಪೂಜೆ, ಜಪ, ಯಾತ್ರೆ, ಹವನಗಳು ವ್ಯರ್ಥ. ದೀಪ ಉರಿಯಲು ಎಣ್ಣೆ ಹೇಗೆ ಅಗತ್ಯವೋ, ಹಾಗೆಯೇ ಬತ್ತಿಯಿದ್ದರೂ ಬೆಳಕು ಕಾಣುವುದಿಲ್ಲ. ಜನರು ಬಾಹ್ಯಾಚಾರಗಳನ್ನು ನಿಭಾಯಿಸಬಹುದು, ಆದರೆ ಒಳಗಿನ ಭಕ್ತಿ ಇಲ್ಲದೆ, ಆಚಾರಗಳು ನಿರರ್ಥಕ.

**“ಕೊಂಡ ನುಡಿದರೆ ಭಕ್ತಿ ಅಲ್ಲ,**
**ಒಂಡು ಹೃದಯವಿದರೆ ಭಕ್ತಿ.”**

**–ದಾಸಿಮಯ್ಯ**

ಈ ವಚನವು ನಿಜವಾದ ಭಕ್ತಿಯ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ದೇವರ ಹೆಸರು ಜಪಿಸುವುದರಿಂದ ಅಥವಾ ಕೇವಲ ಬಾಯಿಯಿಂದ ಶರಣಾಗತಿಯ ಮಾತುಗಳನ್ನು ಉಚ್ಚರಿಸುವುದರಿಂದ ಯಾವುದೇ ಫಲ ಸಿಗುವುದಿಲ್ಲ. ನಿಜವಾದ ಭಕ್ತಿ ಆಚರಣೆಯಲ್ಲಿ ಪ್ರತಿಬಿಂಬಿಸಬೇಕು, ಕೇವಲ ವಚನಗಳ ಮೂಲಕ ಭಕ್ತನಾಗಲು ಸಾಧ್ಯವಿಲ್ಲ. ಭಗವಂತನ ಒಲಿಸುವುದಕ್ಕೆ ಆಡಂಬರದ ಪೂಜೆ, ಹವನ, ತೀರ್ಥಯಾತ್ರೆಗಳಿಗಿಂತಲೂ, ಶುದ್ಧ ಮನಸ್ಸು ಮುಖ್ಯ. ನಿರಾಳ, ನಿರಭಿಮಾನ, ಪ್ರಾಮಾಣಿಕ, ನಿಸ್ವಾರ್ಥ ಪ್ರೀತಿ ಮತ್ತು ಶರಣಾಗತಿ ಇರುವ ಮನಸ್ಸು ಭಗವಂತನಿಗೆ ಸಿಗುವ ಭಕ್ತಿ. ಶುದ್ಧ ಮತ್ತು ನಿಸ್ವಾರ್ಥ ಹೃದಯವೇ ನಿಜವಾದ ಭಕ್ತಿಯ ಗುರುತು ಎಂದಿದ್ದಾರೆ.

ವಚನಗಳಲ್ಲಿ ನೈತಿಕತೆ ಮತ್ತು ಧರ್ಮಪಾಲನೆ: ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯಲ್ಲಿ ನೈತಿಕತೆ ಮತ್ತು ಧರ್ಮಪಾಲನೆಗೆ ಅಪಾರ ಮಹತ್ವವಿದೆ. 12ನೇ ಶತಮಾನದಲ್ಲಿ ವಚನ ಚಳವಳಿಯ ಮೂಲಕ ಬಸವಣ್ಣ ಮತ್ತು ಶರಣರು ನೈತಿಕತೆ, ಮಾನವೀಯತೆ ಮತ್ತು ಧರ್ಮಪಾಲನೆಯ ಮಹತ್ವವನ್ನು ಸಮಾಜಕ್ಕೆ ಬೋಧಿಸಿದರು. ವಚನ ಸಾಹಿತ್ಯ ಕೇವಲ ಭಕ್ತಿಯೊಂದಿಗೇ ಸೀಮಿತವಾಗಿಲ್ಲ, ಅದು ಜೀವನದ ಸರಿಯಾದ ಮಾರ್ಗದರ್ಶನ ನೀಡುವಂತೆ ನಿರ್ಮಿತವಾಗಿದೆ. ಶರಣರು ವಚನಗಳಲ್ಲಿ ವ್ಯಕ್ತಿಯ ನೈತಿಕ ಜೀವನ, ಧರ್ಮಪಾಲನೆಗಳನ್ನು ಪ್ರೋತ್ಸಾಹಿಸಿದರು.

**“ದಯವೇ ಧರ್ಮದ ಮೂಲವಯ್ಯ,**
**ಸತ್ಯವೇ ಪಾಪ ಹರಿಸೋದು,**
**ಶಿವನೊಲಿಸೋ ಪರಿಯವೆನಯ್ಯ,**
**ಕೂಡಲಸಂಗಮದೇವಾ!”**

**–ಬಸವಣ್ಣ**

ಈ ವಚನವು ಬಸವಣ್ಣನವರು ಪ್ರತಿಪಾದಿಸಿದ ಧಾರ್ಮಿಕ ತತ್ತ್ವದ ಮೂಲ ಸಿದ್ಧಾಂತವಾಗಿದೆ. ದಯೆ, ಕರುಣೆ, ಪರೋಪಕಾರ ಮತ್ತು ಸಹಾನುಭೂತಿ ಯಾವುದೋ ಧರ್ಮದ ಮೂಲ ಅಂಶ. ಧರ್ಮ ಕೇವಲ ಆಚರಣೆಗಳಲ್ಲ, ಅದು ಮಾನವೀಯತೆಯ ಅಧಾರದಿಂದಲೇ ಜೀವನದಲ್ಲಿ ಅರ್ಥಪೂರ್ಣವಾಗಬೇಕು. ಸತ್ಯಾಚಾರ ಮತ್ತು ನೈತಿಕತೆ ಜೀವನದಲ್ಲಿ ಪಾಪ ನಿವಾರಣೆಗೆ ಸಹಾಯ ಮಾಡುತ್ತದೆ. ಸುಳ್ಳು, ಮೋಸ, ಅನ್ಯಾಯ ಇವು ಪಾಪದ ಸಂಕೇತಗಳು; ಸತ್ಯದಿಂದ ಪಾಪವನ್ನು ದೂರ ಮಾಡಬಹುದು.

ದಯೆಯನ್ನು ನಿಜವಾದ ಧರ್ಮದ ಮೂಲವೆಂದು ಪ್ರತಿಪಾದಿಸುತ್ತದೆ. ಇದು ಕೇವಲ ಧಾರ್ಮಿಕ ಆಚರಣೆಗಳ ಬಗ್ಗೆ ಮಾತ್ರ ಅಲ್ಲ, ನೈತಿಕ ಜೀವನ ಶೈಲಿಯ ಬಗ್ಗೆ

ಒತ್ತಿ ಹೇಳುತ್ತದೆ.

**"ನೀನು ಪತಿವ್ರತೆ, ಗಂಡನೊಲಿಯದಿರೆ,**
**ನಿನ್ನ ಪತಿವ್ರತೆ ಎಂಥದು?**
**ಪರಶಿವನೊಲಿಯದೆ ಭಕ್ತಿಯೆಂದರೆ,**
**ಅದು ನಿಜ ಭಕ್ತಿಯೋ?"**

**– ಅಕ್ಕಮಹಾದೇವಿ**

ಭಕ್ತಿಯ ಜೊತೆಗೆ ಶರಣಾಗತಿಯ ಮಹತ್ವವನ್ನು ಸಾರುತ್ತಾರೆ. ಕೇವಲ ಭಕ್ತಿ ಸಾಕಾಗುವುದಿಲ್ಲ; ಪರರ ನೋವನ್ನು ಅರ್ಥೈಸುವ ದಯೆ ಪ್ರಮುಖವಾಗಿ ಇರಬೇಕು. ದಯೆಯು ಅಹಂಕಾರವನ್ನು ಮುರಿಯುವ ಶಕ್ತಿ, ಪರರಿಗೆ ನೋವನ್ನು ಕೊಡದೆ, ಪ್ರೀತಿಯಿಂದ ಹಾಗೂ ಭಗವಂತನ ದಯೆಯಿಂದ ಬದುಕುವಗುಣಗಳನ್ನು ಹೊಂದಿರಬೇಕು.

**"ಪೂಜೆಗೆ ಬರುವ ಮೊದಲು,**
**ನೀನು ನಿನ್ನ ಹೃದಯವನ್ನು ಶುದ್ಧಗೊಳಿಸು,**
**ಶುದ್ಧ ಮನಸ್ಸಿನವರ ಸೇವೆಯೇ,**
**ನಿಜವಾದ ಪೂಜೆ."**

**– ಚನ್ನಬಸವಣ್ಣ**

ಚನ್ನಬಸವಣ್ಣನವರು ನಿಜವಾದ ಧರ್ಮದ ಕೇಂದ್ರೀಕೃತ ಅಂಶ ದಯೆ, ಸಮಾನತೆ ಮತ್ತು ಮಾನವೀಯತೆ ಎಂದು ಗುರುತಿಸಿದ್ದಾರೆ. ದೇವರ ಆರಾಧನೆಗೂ ಮುನ್ನ, ಪೂಜೆಯ ಉದ್ದೇಶ ಮತ್ತು ಶುದ್ಧತೆಯ ಬಗ್ಗೆ ಅರಿವು ಇರಬೇಕಿದೆ. ಮನಸ್ಸಿನಲ್ಲಿ ಮುನಿಸು, ದ್ವೇಷ, ಅಹಂಕಾರ ಇರುವಾಗ ದೇವರ ಆರಾಧನೆ ಮಾಡುವುದು ವ್ಯರ್ಥ. ಹೃದಯ ಶುದ್ಧವಾದಾಗ ಮಾತ್ರ ನಿಜವಾದ ಧ್ಯಾನ ಮತ್ತು ಭಕ್ತಿ ಸಾಧ್ಯ. ಶುದ್ಧ ಮನಸ್ಸಿನವರು ಪರೋಪಕಾರ, ದಯೆ, ಪ್ರಾಮಾಣಿಕತೆ ಹೊಂದಿರುತ್ತಾರೆ. ಧಾರ್ಮಿಕತೆಯ ನಿಜವಾದ ಅರ್ಥ ಬಾಹ್ಯಾಚರಣೆಗಿಂತ ಮಾನವೀಯತೆ ಮತ್ತು ಶುದ್ಧ ನೈತಿಕ ಜೀವನ. ಈ ತತ್ವಗಳು ಕೇವಲ ಶರಣ ಸಂಪ್ರದಾಯಕ್ಕೆ ಮಾತ್ರ ಸೀಮಿತವಲ್ಲ, ಎಲ್ಲ ಧಾರ್ಮಿಕ ಜೀವನಕ್ಕೂ ಅನ್ವಯವಾಗುವ ಸತ್ಯ.

ಹೀಗೆ ವಚನ ಸಾಹಿತ್ಯವು ಧರ್ಮಪಾಲನೆಯ ನಿಜವಾದ ಸ್ವರೂಪವನ್ನು ತೋರುವ ಮೂಲಕ, ಕೇವಲ ಆಚರಣೆ ಅಥವಾ ಪುರೋಹಿತವರ್ಗದ ನಿಯಂತ್ರಣಕ್ಕೆ ಸೀಮಿತವಾಗದ ಧಾರ್ಮಿಕ ಜೀವನಶೈಲಿಯನ್ನು ಪ್ರತಿಪಾದಿಸುತ್ತದೆ. ಇದು ವ್ಯಕ್ತಿಯ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಒತ್ತಿ ಹೇಳುವ ಮೂಲಕ, ನಿಜವಾದ ಧಾರ್ಮಿಕತೆಯ ಸಾರವನ್ನು ಬೆಳಕಿಗೆ ತರುತ್ತದೆ.

ವಚನಗಳಲ್ಲಿ ಸಾಧನೆಯ ಮಹತ್ವ: ಶರಣ ಸಾಹಿತ್ಯದಲ್ಲಿ ಸಾಧನೆ (ತಪಸ್ಸು,

ಪರಿಶ್ರಮ, ಭಕ್ತಿ, ಹಾಗೂ ಆತ್ಮಾನುಶೀಲನೆ) ಅತ್ಯಂತ ಪ್ರಮುಖ ಅಂಶಗಳಾಗಿದವೆ. ಶರಣರು ಸಾಧನೆಯ ಪ್ರಾಮುಖ್ಯತೆಯನ್ನು ಒತ್ತಿಹೇಳಿ, ಕೇವಲ ಬಾಹ್ಯ ಆಚರಣೆಗಳ ಬದಲು ನೈಜ ಪರಿಶ್ರಮ ಮತ್ತು ಭಗವಂತನ ಸಾಧನೆ ಅತ್ಯಗತ್ಯ ಎಂದು ಬೋಧಿಸಿದರು.

"ನಾನು ದೊರೆತು ಕೊಳ್ಳುವದಕೆ, ನಾನೇ ಮಾಡಲೇಬೇಕಯ್ಯ!" – ಅಕ್ಕಮಹಾದೇವಿ ಎಂಬ ವಚನವು ಅವರ ಆತ್ಮಸಾಧನೆಯ ತತ್ವವನ್ನು ಪ್ರತಿಪಾದಿಸುವ ಪ್ರಮುಖ ವಚನವಾಗಿದೆ. ನಿರೀಕ್ಷೆ ಇಲ್ಲದ ಭಕ್ತಿಯನ್ನು ಮತ್ತು ವೈಯಕ್ತಿಕ ಪ್ರಯತ್ನವನ್ನು ಒತ್ತಿಹೇಳುತ್ತದೆ. ಈ ವಚನವು ಆತ್ಮಸಾಧನೆಗೆ ಪ್ರಚೋದನೆ ನೀಡುವ ಮಹತ್ವದ ಸಂದೇಶವನ್ನು ಸಾರುತ್ತದೆ.

**"ಸಾಧಿಸದೆ ನೋಡಿದಡೆ,**
**ಪಾಲು ನೀರು ನೀನು ಬೇರ್ಪಡಿಸುತ್ತೀಯಾ?"**

**– ಅಲ್ಲಮಪ್ರಭು**

ಸಾಧನೆಯಿಲ್ಲದೆ ಯಾವುದೇ ಉದ್ದೇಶ ಮುಟ್ಟಲು ಸಾಧ್ಯವಿಲ್ಲ. ಹಾಲಿನಲ್ಲಿ ತುಪ್ಪ ತಯಾರಿಸಲು ಶ್ರಮ ಬೇಕಾಗುವಂತೆ, ಜ್ಞಾನ ಮತ್ತು ಭಗವಂತನ ಅನುಭವ ಪಡೆಯಲು ನಿರಂತರ ಸಾಧನೆ ಮತ್ತು ಪರಿಶ್ರಮ ಅಗತ್ಯ. ಅದು ನಿರಂತರ ಪರಿಶ್ರಮವಿಲ್ಲದೆ ಯಾವುದೂ ಸಾಧ್ಯವಿಲ್ಲ.

ಯಾವುದೇ ವಿಷಯವನ್ನು ಸಾಕ್ಷಾತ್ಕಾರಗೊಳಿಸದೆ, ಕೇವಲ ಮಾತಿನಲ್ಲಿ ತಿಳಿಯಲು ಸಾಧ್ಯವಿಲ್ಲ. ಜೀವನದಲ್ಲಿ ಸಾಧನೆ (ಪ್ರಯತ್ನ) ಇಲ್ಲದೆ ಏನನ್ನೂ ಪಡೆಯಲು ಸಾಧ್ಯವಿಲ್ಲ. ಜ್ಞಾನ, ಮುಕ್ತಿ, ಅಥವಾ ಭಗವಂತನ ಅನುಭವವನ್ನು ಕೇವಲ ಪುಸ್ತಕ ಅಥವಾ ಮಾತಿನಿಂದ ಪಡೆಯಲು ಸಾಧ್ಯವಿಲ್ಲ, ಇಲ್ಲಿ ಅನುಭವವೇ ಶ್ರೇಷ್ಠ ಗುರುವಾಗುವನು. ಮನಸ್ಸಿನ ಶುದ್ಧತೆ, ಅಧ್ಯಾತ್ಮದ ಅನುಭವ ಮತ್ತು ಸಾಧನೆಯಿಲ್ಲದೆ ವಾಸ್ತವಿಕ ಜ್ಞಾನಕ್ಕೆ ತಲುಪಲು ಸಾಧ್ಯವಿಲ್ಲ.

ಅಹಂಕಾರ ಮತ್ತು ಉಚಿತ ನಿರೀಕ್ಷೆಗಳಿಲ್ಲದೆ ಶುದ್ಧ ಭಕ್ತಿ, ಆತ್ಮಚಿಂತನ ಮತ್ತು ಧ್ಯಾನದ ಮೂಲಕ ಸಾಧನೆ ಮಾಡಬೇಕು. ಈ ವಚನವು ನಮಗೆ ಅಧ್ಯಾತ್ಮದಲ್ಲಿ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಶ್ರಮ, ತಪಸ್ಸು ಮತ್ತು ಅನುಭವದ ಮಹತ್ವವನ್ನು ಬೋಧಿಸುತ್ತದೆ.

ವಚನ ಸಾಹಿತ್ಯವು ಕೇವಲ ಭಕ್ತಿಯ ಪರಿಧಿಯಲ್ಲದೇ, ನೈತಿಕತೆ, ಮಾನವೀಯತೆ, ಸಹಬಾಳ್ವೆ, ಸೌಹಾರ್ದತೆ ಮತ್ತು ಸಾಮಾಜಿಕ ನ್ಯಾಯದ ನಿಲುವುಗಳನ್ನು ಪ್ರತಿಪಾದಿಸುವ ಒಂದು ಮಹತ್ವದ ಸಾಹಿತ್ಯ ಪ್ರಕಾರವಾಗಿದೆ. ವಚನಗಳು ಅನುಭವದ ಮಾತುಗಳಾಗಿದ್ದು, ಆಧ್ಯಾತ್ಮಿಕತೆಯೊಂದಿಗೆ ಜೀವನದ ಮೌಲ್ಯಗಳನ್ನೂ ಸಾರುತ್ತವೆ. ವಚನಕಾರರು ಮಾನವೀಯತೆ, ನೈತಿಕತೆ, ಸಮಾನತೆ,

ಪರಿಶುದ್ಧತೆ, ಶ್ರಮದ ಗೌರವ, ಮಹಿಳಾ ಸಬಲೀಕರಣ, ಸೌಹಾರ್ದತೆ, ಭಕ್ತಿಯ ಸತ್ಕಾರ್ಯತೆ ಮುಂತಾದ ಮೌಲ್ಯಗಳನ್ನು ಒತ್ತಿಹೇಳಿದ್ದಾರೆ.

ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಜನಪದೀಕರಣಕ್ಕೆ ಮಹತ್ವದ ಕೊಡುಗೆ ನೀಡಿದ್ದು, ಜನಸಾಮಾನ್ಯರ ಭಾಷೆಯಲ್ಲಿ, ಅವರ ಸಮಸ್ಯೆಗಳನ್ನು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಿದೆ. ಇದು ಕನ್ನಡ ಸಾಹಿತ್ಯದ ಸಮೃದ್ಧ ಪರಂಪರೆಯಲ್ಲಿ ಅಮೂಲ್ಯವಾದ ಅಧ್ಯಾಯವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಚಿದಾನಂದ ಮೂರ್ತಿ ಎಂ., (2013), ವಚನ ಸಾಹಿತ್ಯ, ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ–5, ಸಪ್ನ ಪ್ರಕಾಶನ, ಬೆಂಗಳೂರು.
2. ಚಿದಾನಂದ ಮೂರ್ತಿ ಎಂ., (1985), ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪ್ರಶ್ಯತೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ನಾರಾಯಣ ಪಿ.ವಿ., (2018), ಅಲ್ಲಮನ ವಚನಗಳು, ಅಂಕಿತ ಪ್ರಕಾಶನ, ಬೆಂಗಳೂರು.
4. ಸಿದ್ಧರಾಮಯ್ಯ ಎಸ್.ಜಿ., (2024), ವಚನಧರ್ಮ ಅರಿವಿನ ಬೆರಗು, ಸಪ್ನ ಪ್ರಕಾಶನ, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.